**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 132/2020**

**ಸಾಕ್ಷಿಯನ್ನು ದಿಃ 25.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಆರ್. ರಮೇಶ | ಪಿಡಬ್ಲ್ಯೂ:1 |
| ತಂದೆಯ ಹೆಸರು | ಲೇಟ್ ರಾಮಶೆಟ್ಟಿ | |
| ವಯಸ್ಸು | 56 ವರ್ಷ | |
| ಉದ್ಯೋಗ | ಎ.ಎಸ್.ಐ ಹುಣಸೂರು ಪಟ್ಟಣ ಪೊಲೀಸ್ ಠಾಣೆ | |
| ವಾಸಸ್ಥಳ | ಕೆ.ಆರ್ ನಗರ. | |

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರಡಿ ಸಾಕ್ಷಿ ವಿಚಾರಣೆ**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿಃ 28.07.2022 ರಿಂದ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಕೇಸಿನ ನಲ್ಲಿ ಆರೋಪಿಯ ಮೇಲೆ ನ್ಯಾಯಾಲಯ ಉದ್ಘೋಷಣೆ ವಾರೆಂಟ್ ಅನ್ನು ಹೊರಡಿಸಿದ್ದನ್ನು ದಿಃ 17.06.2025 ರಂದು ಸ್ವೀಕರಿಸಿರುತ್ತೇನೆ. ಅದರಲ್ಲಿ ದಿಃ 02.07.2025 ರಂದು ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಟೌನ್, ಭ್ರಮರಾಂಬ ಬಡಾವಣೆ, ಅಗ್ನಿಶಾಮಕ ಕಛೇರಿಯ ಪಕ್ಕದಲ್ಲಿ ಇರುವ ಮನೆ ನಂ. 23/18 ರವರ ಮನೆ ಮುಂಭಾಗ ಆರೋಪಿ ಸುನೀಲ್ ನಾಯಕ ಬಿನ್ ಸಿದ್ದಯ್ಯ ರವರ ಮನೆ ಮುಂಭಾಗ ಪಂಚಾಯಿತಿದಾರರಾದ ಮಹಾದೇವ ಮತ್ತು ಕೃಷ್ಣಕುಮಾರ ರವರ ಸಮಕ್ಷಮ ನ್ಯಾಯಾಲಯದ ಸಿಸಿ ನಂ.132/2020 ರಲ್ಲಿ ಆರೋಪಿ ಸುನೀಲ್ ನಾಯಕ ಬಿನ್ ಸಿದ್ದಯ್ಯ

ರವರಿಗೆ ಉದ್ಘೋಷಣೆಯನ್ನು ಹೊರಡಿಸಿದ್ದು, ಸದರಿ ಆರೋಪಿ ತಂದೆ ಸಿದ್ದಯ್ಯ ರವರ ಮನೆಯಲ್ಲಿ ಸುನೀಲ್ ಎಂಬುವವರು ಯಾರು ಇರುವುದಿಲ್ಲ, ನಮ್ಮ ಮನೆಯಲ್ಲಿ ಮತ್ತು ಅವರ ಮನೆಯಲ್ಲಿ ಸಿ.ಎಂ ಸುಬ್ರಮಣ್ಯನಾಯಕ ಎಂಬುವವರು ಮಾತ್ರ ಇರುತ್ತಾರೆ ಎಂದು, ಸುನೀಲ್ ನಾಯಕ ಬಿನ್ ಸಿದ್ದಯ್ಯ ಎಂಬುವವರು ಯಾರೂ ಇರುವುದಿಲ್ಲ ಎಂದು ಪಂಚಾಯಿತಿದಾರರು ಸಿದ್ದಯ್ಯ ರವರ ಆಧಾರ್ ಕಾರ್ಡ ಅನ್ನು ಹಾಜರು ಪಡಿಸಿರುತ್ತಾರೆ.

ಸದರಿ ಆರೋಪಿ ಸುನೀಲ್ ನಾಯಕ ಬಿನ್ ಸಿದ್ದಯ್ಯ ರವರು ಪತ್ತೆ ಆದಲ್ಲಿ ದಿಃ 13.08.2025 ರಂದು ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಪಂಚಾಯಿತಿದಾರರಾಲ್ಲಿ ಉದ್ಘೋಷಣೆಯ ವಾರೆಂಟ್ ಅನ್ನು ಆರೋಪಿ ಸಿದ್ದಯ್ಯ ರವರ ಮನೆಯ ಬಾಗಿಲಿಗೆ ಅಂಟಿಸಲಾಯಿತು, ಇನ್ನೊಂದು ಪ್ರತಿಯನ್ನು ಚಾಮರಾಜನರ ನಗರ ಸಭೆಯ ನೋಟೀಸು ಬೋರ್ಡ ಅಲ್ಲಿ ಅಂಟಿಸಲಾಯಿತು, ನಂತರ ಚಾಮರಾಜನಗರ ನಗರದ, ಭ್ರಮರಾಂಬ ಗ್ರಾಮದಲ್ಲಿ ಟಾಂ ಟಾಂ ರೀತಿಯಲ್ಲಿ ಉದ್ಘೋಷಣೆಯನ್ನು ಏರು ಧ್ವನಿಯಲ್ಲಿ ಸಾರಿ ಸಾರಿ ಹೇಳಲಾಯಿತು. ಮತ್ತೊಂದು ಪ್ರತಿಯನ್ನು ನ್ಯಾಯಾಲಯದ ನೋಟೀಸು ಬೋರ್ಡ್ ಅಲ್ಲಿ ಅಂಟಿಸಿ ಉದ್ಘೋಷಣೆಯನ್ನು ಕಾರ್ಯಗತಗೊಳಿಸಲಾಯಿತು.

ಬೆಳಿಗ್ಗೆ 11 ರಿಂದ 12 ಗಂಟೆ ವರೆಗೆ ಮಹಜರ್ ಜರುಗಿಸಿರುತ್ತೇನೆ. ಸದರಿ ಮಹಜರ್ ಅನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು 1 (ಎ) ಎಂದು, ಪಂಚರಾದ ಮಹಾದೇವ ಮತ್ತು ಕೃಷ್ಣಕುಮಾರ ಸಹಿಗಳನ್ನು ಕ್ರಮವಾಗಿ ನಿಪಿ. 1(ಬಿ ಮತ್ತು ಸಿ ) ಎಂದು ಗುರುತಿಸಲಾಯಿತು. ಉದ್ಘೋಷಣಾ ಸಮಯದಲ್ಲಿ ಎರಡು ಫೋಟೊಗಳನ್ನು ಮೊಬೈಲ್ ನಲ್ಲಿ ತೆಗೆದಿದ್ದು, ಪ್ರಿಂಟ್ ತೆಗೆದ 2 ಫೋಟೊಗಳನ್ನು ನಿಪಿ. 2 ಮತ್ತು 3 ಎಂದು ಹಾಗೂ ಪಂಚಾಯಿತಿದಾರರು ಹಾಜರು ಪಡಿಸಿದ ಆಧಾರ್ ಕಾರ್ಡ ನ ಪ್ರತಿಯನ್ನು ನಿಪಿ. 4 ಎಂದು ಗುರುತಿಸಲಾಯಿತು.

ಆರೋಪಿತನ ಹೆಸರಿನಲ್ಲಿ ಸ್ಥಿರಾಸ್ಥಿ ಇರುವ ಬಗ್ಗೆ ಅಟ್ಯಾಚ್ ಮೆಂಟ್ ವಾರೆಂಟ್ ಹೊರಡಿಸಿದ್ದು, ಚಾಮರಾಜನಗರದ ನಗರ ಸಭೆಗೆ ಮನವಿ ಕೊಟ್ಟು, ವರದಿಯನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯಲ್ಲಿ ಆರೋಪಿತನ ಹೆಸರಿನಲ್ಲಿ ಯಾವುದೆ ಸ್ಥಿರ ಮತ್ತು ಚರಾಸ್ಥಿ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ . ಸದರಿ ವರದಿಯನ್ನು ನಿಪಿ. 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃಆರೋಪಿ ತಲೆ ಮರಿಸಿಕೊಂಡಿರುತ್ತಾನೆ.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.